## ಫ್ಲಮಿನಿಯಾ ಕೊಲೆಲ್ಲಾ ಸಂದರ್ಶನ

◆ **ನಿಮ್ಮ ಮನೆಯ ಬಾಲ್ಯದ ಪರಿಸರವನ್ನು ನೆನಪಿಸಿಕೊಳ್ಳಿ...**

ಓದುವುದು ಮತ್ತು ಪುಸ್ತಕಗಳನ್ನು ಕೈಗೆಟುಕುವಂತೆ ಯಾವಾಗಲೂ ಹತ್ತಿರ ಇಟ್ಟುಕೊಳ್ಳುವುದು ಚಿಕ್ಕಂದಿನಿಂದಲೂ ನನಗಿದ್ದ ಅಭ್ಯಾಸ. ಈ ಹವ್ಯಾಸ ನಂತರದ ದಿನಗಳಲ್ಲಿ ನನ್ನ ಬದುಕಿನ ಭಾಗವಾಯಿತು. ಇದಕ್ಕೆ ನಾನು ನನ್ನ ತಾಯಿಗೆ ಧನ್ಯವಾದ ಹೇಳಬೇಕು. ನನ್ನ ಅಮ್ಮನನ್ನು ಅನುಕರಿಸುತ್ತಾ, ನಾನು ಪುಸ್ತಕಗಳ ಪುಟಗಳ ಜೊತೆಗೆ ಬದುಕುವುದನ್ನು ಕಲಿತೆ, ಅವುಗಳ ವಾಸನೆಯನ್ನು ಗ್ರಹಿಸಿದೆ, ಜೊತೆಗೆ ಹಾಸಿಗೆಯಲ್ಲಿ ನನ್ನೊಂದಿಗೇ ಮಲಗಿಸಿಕೊಂಡೆ. ನನ್ನ ತಾಯಿಯ ತವರು ಮನೆಯವರಿಗೆ ಸಂಗೀತ, ಒಪೆರಾ ಮತ್ತು ಚಿತ್ರಕಲೆಯ ಬಗ್ಗೆ ಅಪಾರ ಆಸಕ್ತಿ ಇತ್ತು. (ನನ್ನ ಅಜ್ಜ ಉತ್ತಮ ಪಿಯಾನೋ ವಾದಕರಾಗಿದ್ದರು, ನನ್ನ ಅಜ್ಜಿ ನಂತರ ವರ್ಣಚಿತ್ರಕಾರರಾದರು). ನಾವು ಮಕ್ಕಳು, ಬಾಲ್ಯದಲ್ಲಿ ಯಾವಾಗಲೂ ಮನೆಯಲ್ಲಿ ಕೇಳಿ ಬರುತ್ತಿದ್ದ ಸಂಗೀತದ ಧ್ವನಿಗೆ ತಕ್ಕಂತೆ ಯೋಚಿಸುತ್ತಾ, ಕಲ್ಪಿಸಿಕೊಳ್ಳುತ್ತಾ ಬದುಕಿದ್ದೇವೆ. ಸಂಗೀತ ಮತ್ತು ಚಿತ್ರಕಲೆ, ಇವತ್ತಿಗೂ ನನಗೆ ವಿಶೇಷ ಆಸಕ್ತಿಯಿರುವ ಮತ್ತು ನಾನು ಪ್ರತಿದಿನ ಹಂಬಲಿಸುವ ಕಲಾ ಪ್ರಕಾರಗಳಾಗಿವೆ. ಮನುಷ್ಯನ ವ್ಯಕ್ತಿತ್ವವನ್ನು ಸಂಗೀತದಷ್ಟು ಆಳವಾಗಿ ಸೆಳೆದುಕೊಳ್ಳುವ ಹಾಗೂ ತೊಡಗಿಸಿಕೊಳ್ಳುವ ಕಲಾ ಪ್ರಕಾರ ಮತ್ತೊಂದಿಲ್ಲ. ಕಾದಂಬರಿಯಲ್ಲಿ ಅಷ್ಟೇ ಅಲ್ಲ, ನಾನು ಕವಿತೆಗಳಲ್ಲೂ ಕಥೆಗಳನ್ನೇ ಹುಡುಕುವೆ. ಸಂಗೀತ ಮತ್ತು ಈ ಕಥೆಗಳು ನನಗೆ ನೀರಿನಷ್ಟು ಸಹಜ ಮತ್ತು ಅವಶ್ಯಕ. ಈ ಬಲವಾದ ಸಹಚರರ ಹೊರತಾಗಿ ಬದುಕುವುದು ಹೇಗೆಂದು ನನಗೆ ತಿಳಿಯದು. ನನ್ನ ಬದುಕನ್ನು, ಇತರರ ಬದುಕಿನ ನಿಗೂಢಗಳನ್ನು ಹಾಗೂ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಇಡೀ ಲೋಕದ ನಿರಂತರತೆಯನ್ನು ರಹಸ್ಯವಾಗಿ ಪ್ರವೇಶಿಸಲು ಅನುವು ಮಾಡಿಕೊಡುವ ಈ ಶಬ್ದನಾದಗಳ ಹೊರತಾಗಿ ನಾನು ಬದುಕಲಾರೆ.

◆ **ನಿಮ್ಮ ಸಾಹಿತ್ಯ ಓದಿನ ಆರಂಭಿಕ ದಿನಗಳು ಹೇಗಿದ್ದವು?**

ಆರಂಭದಲ್ಲಿ ಪುಸ್ತಕಗಳು ಆಸಕ್ತಿಯ ಕೇಂದ್ರಗಳಾಗಿದ್ದವು. ಬರಬರುತ್ತಾ ಅವೇ ನನ್ನ ತಂಗುದಾಣಗಳಾಗಿ ಬದಲಾದವು. ನಂತರ ಅತಿಯಾದ ಮತ್ತು ಎಲ್ಲವನ್ನೂ ಕಬಳಿಸುವ ಪ್ಯಾಷನ್ ಆಗಿ ಮಾರ್ಪಟ್ಟವು. ಓದಿಗೆಂದೇ ನಾನು ತುಂಬಾ ತ್ಯಾಗ ಮಾಡಿದ್ದೇನೆ. ನನ್ನ ಬದುಕಿನ ಹಲವು ವರ್ಷಗಳನ್ನು ನಾನು ಹೆಚ್ಚು ಉಪಯುಕ್ತ ಅಥವಾ ಲಾಭದಾಯಕವಾದ ಕೆಲಸಗಳಿಗೆ ಕೊಡಬಹುದಿತ್ತೇನೋ? (ಮತ್ತಿದು ಶಾಪವೋ ಅಥವಾ ವರವೋ ಅಂತ, ಬಹುಶಃ ನನ್ನ ಜೀವನದ ಕೊನೆಯ ದಿನದವರೆಗೂ ನಾನು ನಿರ್ಧರಿಸಲಾರೆ!) ಆದರೆ ಬಾಳಿನಲ್ಲಿ ನನಗೆ ಆಸಕ್ತಿ ಮೂಡಿಸುವ ವೈವಿಧ್ಯಮಯ ವಿಷಯಗಳನ್ನು ಕೆಲವು ಪುಸ್ತಕಗಳು ಧ್ವನಿಸುತ್ತವೆ ಅಂತ ಬಹಳ ಬೇಗ ಅರಿವಿಗೆ ಬಂತು. ಹಾಗಾಗಿ, ನನ್ನ ಗಮನಕ್ಕೆ ಬರುವ, ರಕ್ತ, ಮಾಂಸ ತುಂಬಿಕೊಂಡು ಚಲಿಸುವ, ಸುತ್ತಮುತ್ತಲಿನ ಜನ ಸಮುದಾಯಕ್ಕಿಂತಲೂ, ಹೆಚ್ಚಿನದನ್ನು ನನ್ನಿಷ್ಟದ ಲೇಖಕರ ಸಾನಿಧ್ಯ, ಮತ್ತವರ ಕಲ್ಪಿತ ಲೋಕ ಸೃಷ್ಟಿಸಿದ ಪ್ರತಿವಾಸ್ತವ ಕಲಿಸಬಲ್ಲದು ಅಂತ ನಾನು ಯಾವಾಗಲೂ ನಂಬುತ್ತೇನೆ.

◆ **ಕವಿತೆಯಲ್ಲಿ ನೀವು ಏನನ್ನು ಹುಡುಕುತ್ತಿದ್ದೀರ ? ಕಾವ್ಯ ರಚನೆಯೆ ಯಾಕೆ ನಿಮ್ಮ ಆಯ್ಕೆ ಆಯಿತು ?**

ಕಾವ್ಯ ನನಗೆ ಖಂಡಿತಾ ಆಯ್ಕೆ ಅಲ್ಲ. ಅದು ನನ್ನೊಳಗೆ ಸಂಭವಿಸಿತು ಎನ್ನಬಹುದು. ನನಗೆ 22 ವರ್ಷವಾಗುವುದಕ್ಕೂ ಮೊದಲು ನಾನು ಕೇವಲ ಗದ್ಯವನ್ನು ಮಾತ್ರ ಬರೆಯುತ್ತಿದ್ದೆ ಮತ್ತು ವಾಸ್ತವವನ್ನು, ಕಾಲ್ಪನಿಕ ನಿರೂಪಣೆಯ ಮೂಲಕ ನೋಡುವ ಒಂದು ಮಸೂರ ಮಾತ್ರ ನನ್ನಲ್ಲಿತ್ತು. ಕೆಲವು ನಿರ್ದಿಷ್ಟ ಕ್ಷಣಗಳಲ್ಲಿ ನಾನು ಯೋಚಿಸಲೂ ಸಾಧ್ಯವಾಗದ್ದನ್ನೂ ನುಡಿಯುವ ಭಾಷೆ ಕಾವ್ಯ. ನಾನು ಶಾಲೆಯಲ್ಲಿ ಆತುರಾತುರವಾಗಿ ಅಧ್ಯಯನ ಮಾಡಿದ ಕವಿಗಳನ್ನು ತಿರುತಿರುಗಿ ಓದುವುದಕ್ಕೆ